ವಾರದ ಪತ್ರ

## ಬಾಲನಟರಿಗೂ ಪ್ರಶಸ್ತಿ ನೀಡಿ

ರಾತ್ರಿ 9 ಗಂಟೆಯ ನಂತರ ಭೂತ–ಪಿಶಾಚಿ, ಕೊಲೆ–ಕ್ರೌರ್ಯ, ಹಾವು ಇರುವಂತಹ ಧಾರಾವಾಹಿಗಳನ್ನು ದಯವಿಟ್ಟು ತೋರಿಸಬೇಡಿ. ಇವುಗಳ ಸಮಯವನ್ನು ಬದಲಾಯಿಸಬೇಕೆಂದು ನನ್ನ ಮನವಿ. ಮಲಗುವ ಸಮಯದಲ್ಲಿ ಮನಸ್ಸು ಶಾಂತವಾಗಿರಬೇಕು. ‘ಪಾಪ ಪಾಂಡು’, ‘ಸೂಪರ್ ಮಿನಿಟ್’, ‘ಸರಿಗಮಪ’, ‘ರಸಪ್ರಶ್ನೆ’ ಮೊದಲಾದ ಮನಸ್ಸಿಗೆ ಮುದ ನೀಡುವಂತಹ ಕಾರ್ಯಕ್ರಮಗಳನ್ನು ರಾತ್ರಿ ಮಲಗುವ ಮುನ್ನ ನೋಡಿದರೆ ಒಳ್ಳೆಯದು.

ಇನ್ನೊಂದು ವಿಷಯವೆಂದರೆ ಕನ್ನಡ ಚಾನೆಲ್‌ಗಳು ಪ್ರತಿ ವರ್ಷ ಅದರಲ್ಲಿ ಬರುವ ಉತ್ತಮ ಕಾರ್ಯಕ್ರಮಕ್ಕೆ ಮತ್ತು ಉತ್ತಮ ಕಲಾವಿದರಿಗೆ ಪ್ರಶಸ್ತಿಗಳನ್ನು ಕೊಡುತ್ತಿದ್ದಾರೆ. ಆದರೆ ಬಾಲ ಕಲಾವಿದರಿಗೆ ಕೊಡುತ್ತಿಲ್ಲ. ಅವರಿಗೂ ಕೊಟ್ಟರೆ ಅವರನ್ನು ಪ್ರೋತ್ಸಾಹಿಸಿದಂತಾಗುತ್ತದೆ. ಅವರಿಗೆ ಹಣದ ರೂಪದಲ್ಲಿ ಬಹುಮಾನ ಕೊಟ್ಟರೆ ಅವರ ವಿದ್ಯಾಭ್ಯಾಸಕ್ಕೆ ಸಹಾಯವಾಗುತ್ತದೆ. ಈ ಎಲ್ಲಾ ಪ್ರಶಸ್ತಿಗಳಿಗೆ ಆ ವರ್ಷ ಪ್ರಾರಂಭವಾದ ಹೊಸ ಧಾರಾವಾಹಿಗಳನ್ನು ಮಾತ್ರ ಪರಿಗಣಿಸಬೇಕು. ಆದರೆ ‘ಪುಟ್ಟ ಗೌರಿ ಮದುವೆ’, ‘ಲಕ್ಷ್ಮೀ ಬಾರಮ್ಮ’, ‘ಅಗ್ನಿಸಾಕ್ಷಿ’ ಮುಂತಾದ ಹತ್ತಾರು ವರ್ಷವಾದರೂ ಮುಗಿಯದ ಧಾರಾವಾಹಿಗಳು ಪ್ರತೀವರ್ಷ ಪ್ರಶಸ್ತಿ ಪಡೆಯುತ್ತಿವೆ.

—ಎಸ್.ಎಸ್. ಶಾರದಾ, ಬೆಂಗಳೂರು

## ಟಿಆರ್‌ಪಿ ರೇಸ್‌ನಲ್ಲಿ ‘ಮೀಟೂ’

ಕನ್ನಡದ ಸುದ್ದಿ ವಾಹಿನಿಗಳು ಇತ್ತೀಚೆಗೆ ನಟಿಯರು ಬಿಚ್ಚಿಟ್ಟ ‘ಮೀಟೂ’ ಅಭಿಯಾನ ಪ್ರಸಾರ ಮಾಡುವಾಗ ಸಭ್ಯತೆಯ ಎಲ್ಲೆ ಮೀರಿದ್ದು ವಿಷಾದಕರ. ಸುದ್ದಿ ಪ್ರಸಾರ ತಪ್ಪಲ್ಲ. ಪ್ರಸಾರ ಮಾಡಿದ ವೈಖರಿ, ಕ್ಲೋಸಪ್ ದೃಶ್ಯಗಳು ಪ್ರಜ್ಞಾವಂತ ವೀಕ್ಷಕರಿಗೆ ಶಾಕ್ ನೀಡಿವೆ. ನಿಮಿಷಕ್ಕೊಮ್ಮೆ ನಟಿಯನ್ನು ಅರೆನಗ್ನವಾಗಿ ತೋರಿಸುವುದು, ಚುಂಬನದ ದೃಶ್ಯವನ್ನು ಕಾಣಿಸುವುದು ಸರಿಯಲ್ಲ. ಬಹುತೇಕ ವಾಹಿನಿಗಳಲ್ಲಿ ‘ಮೀಟೂ’ ಇತರ ಸುದ್ದಿಗಳನ್ನು ನುಂಗಿ ಹಾಕಿತು.

– ರಮಾನಂದ ಶರ್ಮಾ, ಬೆಂಗಳೂರು

## ಅಸಹಜತೆ ಏಕೆ?

ಎಲ್ಲೆಲ್ಲೋ ಸುತ್ತಿ ಅಸಹಜತೆಯನ್ನೇ ಎತ್ತಿ ತೋರಿಸುತ್ತಿರುವ ‘ಕಿನ್ನರಿ’ ಮುಗಿಯುವುದು ಎಂದು? ಯಾವ ಭಾಗಕ್ಕೆ ಪ್ಲಾಸ್ಟಿಕ್ ಸರ್ಜರಿ ಆಗಿದೆಯೋ ಅಲ್ಲಿ ಮಾತ್ರ ಬದಲಾವಣೆ ಕಾಣಿಸುತ್ತದೆಯೇ ಹೊರತು ಧ್ವನಿ, ನಡಿಗೆ, ಹಾವಭಾವಗಳಲ್ಲಿ ಅಲ್ಲ. ಸಾಮಾನ್ಯವಾಗಿ ತಾಯಂದಿರು ಮಕ್ಕಳಿಂದ ವರ್ಷಗಟ್ಟಲೆ ದೂರವಿದ್ದರೂ ಆ ಮಕ್ಕಳು ಯಾವುದೇ ಬದಲಾವಣೆ ಹೊಂದಿದ್ದರೂ ನಡಿಗೆ, ಧ್ವನಿಯಿಂದ ಮಕ್ಕಳನ್ನು ಗುರುತಿಸುತ್ತಾರೆ. ಇಲ್ಲಿ ಈ ಸಹಜತೆಯನ್ನು ಮೂಲೆಗೆ ತಳ್ಳಿದ್ದಾರೆ. ನಕುಲ್ ಸತ್ತಿದ್ದಾನೆಂದು ತಿಳಿದಾಕ್ಷಣ ಮಣಿಯನ್ನು ಬಿಳಿಸೀರೆ, ಬೋಳು ಕೈಗಳಲ್ಲಿ ತೋರಿಸುತ್ತಾರೆ. ನಿರ್ದೇಶಕರೇ, ನೀವಿರುವುದು 21ನೇ ಶತಮಾನದಲ್ಲಿ ಎಂಬುದನ್ನು ಮರೆಯಬೇಡಿ.

– ಶಾಂತಾ ನಾಗರಾಜ್ ಕೆ., ಬೆಂಗಳೂರು

## ಪ್ರಭಾವಶಾಲಿ ನಟನೆ

ಟಿ. ಎನ್. ಸೀತಾರಾಂ ಒಬ್ಬ ಅತ್ಯುತ್ತಮ ನಿರ್ದೇಶಕರಷ್ಟೆ ಅಲ್ಲ, ಪ್ರತಿಭಾವಂತ ನಟರೂ ಹೌದು ಎಂಬುದನ್ನು ‘ಮಗಳು ಜಾನಕಿ’ಯ ಪ್ರಮುಖ ಪಾತ್ರದ ಮೂಲಕ ಸಾಬೀತುಗೊಳಿಸುತ್ತಿದ್ದಾರೆ. ಜಾನಕಿಯ ಕುರಿತ ಭಾವುಕ ಸನ್ನಿವೇಶಗಳಲ್ಲಿ, ತಂಗಿ ಶ್ಯಾಮಲಾರ ಜೊತೆಗಿನ ಆತ್ಮೀಯ ಕ್ಷಣಗಳಲ್ಲಿ ಅವರ ಅಭಿನಯ ವೀಕ್ಷಕರ ಕಣ್ಣಲ್ಲಿ ನೀರು ತರಿಸುವಷ್ಟು ಪ್ರಭಾವಶಾಲಿಯಾಗಿದೆ. ಅವರ ಈವರೆಗಿನ ಎಲ್ಲ ಧಾರಾವಾಹಿಗಳಲ್ಲಿ ಉತ್ತಮ ವಕೀಲನಾದರೂ ಮುಂಗೋಪಿ, ವ್ಯವಹಾರದಲ್ಲಿ ಪೆದ್ದು ಎನಿಸಿದ ಸಿ. ಎಸ್. ಪಿ.ಯವರನ್ನೇ ನೋಡಿದ್ದ ವೀಕ್ಷಕರಿಗೆ ಅವರ ಈ ಇನ್ನೊಂದು ಮುಖ ಅಚ್ಚರಿ ತರಿಸುವಂತಿದ್ದು ಸೀತಾರಾಮ್ ಅವರ ನಿರ್ದೇಶನವನ್ನು ಮೆಚ್ಚುವುದೋ, ನಟನೆಯನ್ನು ಶ್ಲಾಘಿಸುವುದೋ ಎಂಬ ಗೊಂದಲಕ್ಕೊಳಗಾಗುವಂತೆ ಮಾಡಿದೆ.

ಧಾರಾವಾಹಿ ಚೆನ್ನಾಗಿದ್ದು ಶನಿವಾರವೂ ಪ್ರಸಾರ ಮಾಡಿ. ಸಮಯ ಹೋಗಿದ್ದೇ ಗೊತ್ತಾಗುವುದಿಲ್ಲ.

– ಮೀರಾ ಮೋಹನ್, ಕ್ಯಾಲಿಫೋರ್ನಿಯಾ;
ಎಚ್.ಶಶಿಧರ, ಬೆಂಗಳೂರು

## ಶಿಸ್ತಿರಲಿ...

‘ಬಿಗ್ ಬಾಸ್ ’ ಕಾರ್ಯಕ್ರಮ ಮನರಂಜನೆಯೊಂದಿಗೆ ಶಿಸ್ತು, ಸಂಯಮ, ಸಜ್ಜನಿಕೆ ಮುಂತಾದವುಗಳನ್ನು ಒಂದೇ ಮನೆಯಲ್ಲಿ ಕಲೆತಿರುವ ಸದಸ್ಯರು ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವುದರಲ್ಲಿ ಸದಾವಕಾಶ ನೀಡಿದೆ. ಆದರೆ ಸದಸ್ಯರಲ್ಲಿ ನಾ ಕಂಡಂತೆ ಕೆಲವರು ಸೋಫಾದ ಮೇಲೆ ಪಾದರಕ್ಷೆಗಳನ್ನು ಧರಿಸಿ ಕುಳಿತುಕೊಳ್ಳುವರು. ಇನ್ನು ವಾದ ವಿವಾದಗಳ ಸುತ್ತಿನಲ್ಲಿ ಕಟ್ಟುಪಾಡುಗಳ ಪರಿಧಿಯನ್ನು ನಿರ್ಮಿಸಿಕೊಳ್ಳುವುದು ಹಿತಕರ. ಹಾಗೆಯೇ ರಸಪ್ರಶ್ನೆ, ಸಂಗೀತ, ನೃತ್ಯ, ನಾಟಕ ಮೊದಲಾದವುಗಳನ್ನು ಸಂಯೋಜಿಸಿದರೆ ಸುಪ್ತ ಪ್ರತಿಭೆಗಳು ಹೊರಹೊಮ್ಮುವವು. ಸಮಗ್ರವಾಗಿ ಬಿಗ್ ಬಾಸ್ ಕಾರ್ಯಕ್ರಮ ಸಮಾಜಕ್ಕೆ ಉತ್ತಮ ಸಂದೇಶವನ್ನು ನೀಡುವ ನಿಟ್ಟಿನಲ್ಲಿ ಮೌಲ್ಯಯುತವಾಗಿ ಪ್ರಸರಣಗೊಳ್ಳಲಿ.

– ಪೂರ್ಣಿಮಾ ಮೂರ್ತಿ, ಬೆಂಗಳೂರು

## ಬೇಸರ ತರಿಸುವ ಧಾರಾವಾಹಿ

ಅನಾವಶ್ಯಕವಾಗಿ ಬೆಳೆಯುತ್ತಿರುವ ಧಾರಾವಾಹಿ ‘ಅಗ್ನಿಶಾಕ್ಷಿ’ ವೀಕ್ಷಕರಿಗೆ ಬೇಸರ ಹಾಗೂ ವಾಕರಿಕೆ ತರಿಸುತ್ತಿದೆ ಎಂದರೆ ತಪ್ಪಾಗಲಾರದು. ಅದರ ಜೊತೆಗೆ ತನುವಿನ ಪಾತ್ರ ಏನು ಎಂಬುದೇ ಅರ್ಥವಾಗುತ್ತಿಲ್ಲ. ಅವಳ ಪಾತ್ರ ಧಾರಾವಾಹಿಯಲ್ಲಿ ನಾಟಕದಲ್ಲಿರುವಂತಹ ಸೂತ್ರಧಾರಿಣಿಯಂತೆ ಗೋಚರವಾಗುತ್ತಿದೆ. ಆದಷ್ಟು ಬೇಗ ಈ ಧಾರಾವಾಹಿ ಮುಗಿಸಿದರೆ ವೀಕ್ಷಕರಿಗೆ ನೆಮ್ಮದಿ ಸಿಗಬಹುದು ಎಂದು ನಾನು ಭಾವಿಸುತ್ತೇನೆ.

—ಎಸ್.ಎಸ್.ಚಂದ್ರಶೇಖರ್,
ಬೆಂಗಳೂರು

## ಬಿಗ್ ಬಾಸ್!

ಬಂದೀಖಾನೆ
ಮೃಗಾಲಯ
ಹುಚ್ಚಾಸ್ಪತ್ರೆ
ಸರ್ಕಸ್
ಇದೆಲ್ಲದರ
ಸಮ್ಮಿಲನವೇ
ಬಿಗ್ ಬಾಸ್!

—ಪಿ.ಜೆ.ರಾಘವೇಂದ್ರ
ಮೈಸೂರು

## ಕನ್ನಡಕ್ಕೆ ಪ್ರಾಮುಖ್ಯತೆ ಇರಲಿ

ಕಲರ್ಸ್ ಕನ್ನಡದಲ್ಲಿ ವಾರಾಂತ್ಯದ ಎರಡು ದಿನ ಪ್ರಸಾರವಾಗುವ ‘ಮಜಾ ಟಾಕೀಸ್’ನಲ್ಲಿ ಕನ್ನಡದ ಜೊತೆ ಇಂಗ್ಲಿಷ್ ಹೆಚ್ಚು ಬಳಕೆಯಾಗುತ್ತಿದೆ. ಅತಿಥಿಗಳು ಮಾತ್ರವಲ್ಲದೆ ನಿರೂಪಕ ಸೃಜನ್ ಲೋಕೇಶ್ ಕೂಡ ಇಂಗ್ಲಿಷ್‌ನಲ್ಲೇ ಮಾತನಾಡುತ್ತಾರೆ. ಸಾಧ್ಯವಾದಷ್ಟು ಕನ್ನಡಲ್ಲಿಯೇ ಮಾತನಾಡಿದರೆ ಚೆನ್ನಾಗಿರುತ್ತದೆ. ಅದರಲ್ಲೂ ಕರ್ನಾಟಕ ರಾಜ್ಯೋತ್ಸವದ ಮಾಸದಲ್ಲಿ ನಾವಿದ್ದೇವೆ. ಅನಿವಾರ್ಯತೆಯನ್ನು ಹೊರತುಪಡಿಸಿ ಮಿಕ್ಕ ಸಂದರ್ಭದಲ್ಲಿ ಕನ್ನಡಕ್ಕೆ ಪ್ರಾಮುಖ್ಯತೆ ನೀಡಲಿ ಎನ್ನುವುದು ಕೋರಿಕೆ.

—ನಾರಾಯಣ ಯಾಜಿ, ಶಿರಾಲಿ